## ನಿನಗೇ ಸೇರಿದ್ದು

ಗುಂಡ ಮಕ್ಕಳಿಗಾಗಿ ಒಂದು ಅಪರೂಪದ ಗೊಂಬೆ ತಂದಿದ್ದ. ಆತನ ಮಕ್ಕಳಿಬ್ಬರು 'ತನಗೆ ತನಗೆ' ಎಂದು ಕಾಡತೊಡಗಿದರು. ಗುಂಡ ಎಷ್ಟೇ, ಏನೇ ಹೇಳಿದರು ಅವರು ಹಿಡಿದ ಪಟ್ಟನ್ನು ಬಿಡಲಿಲ್ಲ. ಆತನಿಗೂ ರೋಸಿ ಹೋಗಿ ಕೊನೆಗೆ, 'ನೋಡಿ ಮಕ್ಕಳೇ, ನಿಮ್ಮಲ್ಲಿ ಯಾರು ಯಾವಾಗಲೂ ಅಮ್ಮನ ಮಾತನ್ನು ಕೇಳುತ್ತಾರೋ ಅವರಿಗೆ ಈ ಗೊಂಬೆ' ಎಂದ. ತಕ್ಷಣವೇ ಮಕ್ಕಳಿಬ್ಬರೂ ಗೊಂಬೆಯನ್ನು ತಂದೆಯ ಕೈಗೇ ತಂದು ಕೊಟ್ಟು ಹೇಳಿದರು, 'ಹಾಗಾದರೆ ಅಪ್ಪ, ಈ ಗೊಂಬೆ ನಮಗೆ ಸೇರೋದಿಲ್ಲ, ಅದು ನಿನಗೆ ಸೇರೋದು'.

**ಶಂಕರೇಗೌಡ ತುಂಬಕೆರೆ**



## 'ಹ್ಯಾಗೆ ಹೋಗೋದು?'

ಅಂದು ಬೆಳಗ್ಗೆ ಯಾವುದೋ ಕಾರ್ಯ ನಿಮಿತ್ತ ಹೊರಗೆ ಹೋಗಿದ್ದ ಗುಂಡ ಸುಸ್ತಾಗಿ ಮನೆಗೆ ಹಿಂತಿರುಗಿ ಬಂದವನೇ ಹೆಂಡತಿಗೆ, 'ಲೇ ಒಂದು ಲೋಟ ನೀರು ಕೊಡು' ಎಂದು ಕೇಳಿದ. ನೀರು ತಂದು ಕೊಟ್ಟ ಹೆಂಡತಿ, 'ರೀ ಪಕ್ಕದ ಮನೆಯಾತ ಬಂದಿದ್ದರು. ಅವರ ಹೆಂಡತಿಯ ತಿಥಿಯಂತೆ. ಖಂಡಿತಾ ಬರಬೇಕೆಂದು ಹೇಳಿ ಹೋಗಿದ್ದಾರೆ' ಎಂದಳು. ಗುಂಡ 'ಹೌದಾ?, ನೀನು ಬೇಕಾದರೆ ಹೋಗು; ನಾನು ಹೋಗೋದಿಲ್ಲ' ಎಂದ. ಹೆಂಡತಿ, 'ಏನ್ರೀ ನೀವು ಹೇಳ್ತಾ ಇರೋದು? ಯಾಕೆ ಹೋಗೋದಿಲ್ಲ?' ಎಂದು ಪ್ರಶ್ನಿಸಿದಳು. ಆದಕ್ಕೆ ಗುಂಡ– 'ಹೆಂಡತಿಯ ತಿಥಿ ಅಂತ ಈಗಾಗಲೇ ಅವರು ಮೂರು ಬಾರಿ ಕರೆದಿದ್ದಾರೆ. ಆದರೆ ನಾನು ಅವರನ್ನು ಒಂದೇ ಒಂದು ಬಾರಿಯೂ ಕರೆದಿಲ್ಲವಲ್ಲ. ಹ್ಯಾಗೆ ಹೋಗೋದು ನೀನೇ ಹೇಳು' ಎಂದ!

**ಇಂದಿರಾಸುತ**



ಚಿತ್ರಗಳು: ಗಣೇಶ ಆಚಾರ್ಯ